**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಲ್.ಎ.ಸಿ ಅಪೀಲು ಸಂಖ್ಯೆ–521/2025**

ಎ.ಡಬ್ಲ್ಯೂ– 1

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 04–06–2026**

**ಮಧ್ಯಂತರ ಅರ್ಜಿ 1ರ ಮೇಲಿನ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ಮಧ್ಯಂತರ ಅರ್ಜಿ 1ರ ಮೇಲೆ ತಮ್ಮ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

**ಪಾಟೀಸವಾಲುಃ 1 ಹಾಗೂ 2ನೇ ಎದುರುದಾರರ ಪರ ಡಿಜಿಪಿ ರವರಿಂದ**

ಎಲ್ ಎ ಸಿ ನಂ.9/2003 ಪ್ರಕರಣವನ್ನು ನನ್ನ ತಂದೆ ಹೊಟ್ಟೇಗೌಡರವರು 2003ನೇ ಸಾಲಿನಲ್ಲಿ ದಾಖಲ್ಮಾಡಿದ್ದರು. ನನ್ನ ತಂದೆ ಸುಮಾರು 5–6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಎಲ್ ಎ ಸಿ ಪ್ರಕರಣದಲ್ಲಿ ಜಮಾ ಮಾಡಿದ ಹಣವನ್ನು ಅಂದರೆ ಗುಂಟೆಗೆ 20 ರಿಂದ 30 ಸಾವಿರ ರೂ.ನಂತೆ ಪರಿಹಾರ ಹಣವನ್ನು ಪಡೆದಿದ್ದರು. ನನ್ನ ತಂದೆ ಮೃತಪಡುವುದಕ್ಕಿಂತ ಮೊದಲೇ ಅಂದರೆ ಅವರ ಜೀವಿತ ಕಾಲದಲ್ಲಿ ಪರಿಹಾರವನ್ನು ಪಡೆದುಕೊಂಡಿದ್ದರು. ಎಷ್ಟು ವರ್ಷಗಳ ಹಿಂದೆ ನನ್ನ ತಂದೆ ಪರಿಹಾರ ಪಡೆದುಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು, ಪ್ರಕರಣವನ್ನು ನಡೆಸಿ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯ ಪರಿಹಾರವನ್ನು ಸಮಂಜಸವಾಗಿ ನೀಡಿದ್ದು, ಕಾರಣ ನನ್ನ ತಂದೆಯವರು ಅವರ ಜೀವಿತ ಕಾಲದಲ್ಲಿ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಪಕ್ಕದ

ಜಮೀನಿನವರಿಗೆ ಹೆಚ್ಚಿನ ಪರಿಹಾರ ನೀಡಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಪಕ್ಕದ ಜಮೀನಿನವರು ಪರಿಹಾರ ಪಡೆದ ದಾಖಲೆಗಳನ್ನು ಹಾಜರುಪಡಿಸಿದ್ದೆನು. ಪಕ್ಕದ ಜಮೀನಿನ ಪ್ರಕರಣದ ಸಂಗತಿಗಳು ಹಾಗೂ ನನ್ನ ತಂದೆ ಹಾಕಿದ ಪ್ರಕರಣದ ಸಂಗತಿಗಳು ಬೇರೆ ಬೇರೆ ತಾಳೆಯಾಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ, ಎಲ್ಲಾ ಒಂದೆ. ನನ್ನ ತಂದೆ ಮರಣ ಹೊಂದಿದ್ದಕ್ಕೆ ಮರಣ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆ. ಎಲ್ ಎ ಸಿ 9/2003 ರಲ್ಲಿ ಆಗಿರುವ ಆದೇಶ ನನ್ನ ಗಮನಕ್ಕೆ ಬಂದಿರಲಿಲ್ಲ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನನಗೆ ಪಾರ್ಶ್ವವಾಯು ಆದ ಬಗ್ಗೆ ಹಾಗೂ ಆರೋಗ್ಯ ಸರಿ ಇಲ್ಲದೇ ಇರುವ ಬಗ್ಗೆ ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನ್ನ ತಂದೆ ಹೂಡಿದ ಪ್ರಕರಣದಲ್ಲಿ ನ್ಯಾಯಾಲಯ ಸಮಂಜಸವಾದ ಆದೇಶ ಮಾಡಿದ್ದು, ಸದರಿ ಆದೇಶ ನನ್ನ ತಂದೆ ಹಾಗೂ ನನ್ನ ಗಮನದಲ್ಲಿದ್ದು, ಆದ ಕಾರಣ ನನ್ನ ತಂದೆಯವರು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 5685 ದಿನಗಳು ತಡವಾಗಿ ಅರ್ಜಿ ಸಲ್ಲಿಸಿದ್ದು ಯಾವುದೇ ದಾಖಲೆಗಳನ್ನು ಅದಕ್ಕೆ ಪೂರಕವಾಗಿ ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.